ಇಲ್ಲೇ ಉಳಿದುಬಿಟ್ಟಿದೆ ಅಮ್ಮನ ಮನೇಲಿ ಕೊಟ್ಟಿದ್ದು. ಪ್ಲೀಸ್ ಅದು ತಗೊಂಡು ಹೋಗಿ ಬಿಡ್ತೀನಿ" ಅತ್ತಳು. ನಾನೂ ಕರಗಿದ್ದೆ.

ಬಾಗಿಲು ತೆರೆಯುತ್ತಾ, "ಏನು ಬೇಕೋ ತಗೊಂಡು ಹಾಳಾಗಿ ಹೋಗು. ಮತ್ತೆಂದೂ ಮುಖ ತೋರಿಸಬೇಡ" ಎಂದೆ. ನನಗೆ ಅವಳೆದುರು ಅಳಬೇಕೆಂದು ಯಾವ ಉದ್ದೇಶವೂ ಇರಲಿಲ್ಲ. ಸೀದಾ ಒಳ ಹೋದಳು. ಮೊದಲಿಗೆ ಬಚ್ಚಲು ಮನೆಯಲ್ಲಿ ನಲ್ಲಿ ನೀರಿನ ಸಪ್ಪಳ, ನಂತರ ನಮ್ಮದಾಗಿದ್ದ ರೂಮಿನಲ್ಲಿ ಕಪಾಟು ತೆರೆದ ಸದ್ದಾಯಿತು. ಅವಳೇನೇ ಒಯ್ದಿದ್ದರೂ ಕೇಳುವ ವ್ಯವಧಾನ ನನಗಿರಲಿಲ್ಲ. ಅವಳು ಮಾತ್ರ ಅವಳದಾಗಿದ್ದ ಕೆಲವೇ ಒಡವೆಗಳನ್ನು ತೆಗೆದುಕೊಂಡು ಈಚೆ ಬಂದಳು. ಹಜಾರದ ದಿವಾನದ ಮೇಲೆ ಅದನ್ನಿರಿಸಿ, "ನೀವೊಂದು ಸಲ ನೋಡಿ ಬಿಡಿ" ಎಂದಳು. ನಾನು ನೋಡಲಿಲ್ಲ. ಅಡಿಗೆ ಕೋಣೆಗೆ ತಾಗಿಕೊಂಡಿದ್ದ ಆ ಕೋಣೆಗವಳು ಹೋದಳು. ಒಂದಷ್ಟು ಹೊತ್ತು ಮೂಗುಬ್ಬಸ, ಸರ ಬರ ಅಳು ಕೇಳಿಸಿತು. ಹೋಗಿ ನಿಂತೆ. ಕಳಚಿದ್ದ ಆ ಬಳೆಗಳನ್ನು ಕೈಯಲ್ಲಿ ಹಿಡಿದು, "ಅಮ್ಮಾ ಈ ಬಳೆಗಳನ್ನು ನೀವು ನಿಮ್ಮ ಸೊಸೆಗಂತ ಕೊಟ್ಟಿದ್ದು. ಹಿಂತಿರುಗಿಸಿಕೊಡ್ತೇನೆ. ನಿಮ್ಮ ಬಳಿಯೇ ಇರಲಿ. ಇನ್ನೊಬ್ಬ ಸೊಸೆ ಬಂದರೆ ಉಪಯೋಗಕ್ಕೆ ಬರುತ್ತೆ" ಎಂದಳು.

ಅಮ್ಮ ಅಳುತ್ತಾ, "ನೀನು ಸೊಸೆಯಂತ ಕೊಟ್ಟಿದ್ದಲ್ಲ. ಮಗಳಾಗಿದ್ದೆಯಂತ ಕೊಟ್ಟಿದ್ದೆ. ಒಂದು ಸಾರಿ ಕೊಟ್ಟಿದ್ದು ಹಿಂಪಡೆಯೋದು ನಮ್ಮ ವಂಶದಲ್ಲೇ ಯಾರಿಗೂ ಬಂದಿಲ್ಲ. ನೀನಿಲ್ಲಿ ನನ್ನ ಕಣ್ಣೆದುರು ನಿಲ್ಲಬೇಡ, ಹೊಟ್ಟೆ ಉರಿಸಬೇಡ. ಈ ಬಳೆಗಳನ್ನು ತೊಟ್ಟುಕೊಂಡು ಹೊರಟು ಬಿಡು. ಇನ್ನೆಂದೂ ಈ ಕಡೆ ಬರಬೇಡ" ಎಂದಳು.

ಸೆರಗಿನ ಚುಂಗನ್ನು ಬಾಯಿಗೆ ಅಡ್ಡ ಹಿಡಿದು ಉಕ್ಕಿ ಬರುತ್ತಿದ್ದ ಕಣ್ಣೀರನ್ನು ಹತ್ತಿಕ್ಕದೆ ತನ್ನದಾದ ಒಡವೆ ವಸ್ತುಗಳನ್ನು ಚೀಲಕ್ಕೆ ತುಂಬಿಕೊಳ್ಳುತ್ತಾ ಹೊರಟು ಬಿಟ್ಟಿದ್ದಳು. ಅದಾದ ಮೇಲೆ ಬರಲೇ ಇಲ್ಲ. ಯಾವತ್ತೂ ಬರಲಿಲ್ಲ. ಅಮ್ಮ ಹೋಗಿಬಿಟ್ಟ ಮೇಲೆ ಮೂರು ತಿಂಗಳ ನಂತರ ಒಮ್ಮೆ ಕರೆಮಾಡಿ ಅತ್ತಿದ್ದಳು. ಅಮ್ಮನ್ನ ನೆನಪಿಸಿಕೊಂಡಳು. ಅಷ್ಟಕ್ಕೆ ಮುಗಿದಿತ್ತು.

ಆ ದಿನ... ರಭಸವಾಗಿ ಬಾಗಿಲಿಟ್ಟುಕೊಂಡ ದಿನ ನೆನಪಾಯ್ತು. ಈ ದಿನ... ಅವಳ ಮುಖಕ್ಕೆ ರಾಚುವಂತೆ ಬಾಗಿಲಿಟ್ಟುಕೊಳ್ಳಬೇಕು ಎನಿಸಲಿಲ್ಲ. ಮಾತಾಡದೆ ನಿಂತೆ. ಸೀದ ಒಳ ನುಗ್ಗಿ ವರಾಂಡಾದಲ್ಲೇ ಅವಳ ಲಗೇಜಿಟ್ಟು "ಒಂದು ನಿಮಿಷ ಬರ್ತೀನಿ" ಎಂದು ಬಚ್ಚಲಿಗೆ ಹೋದಳು. ಅವಳು ಬರುವಷ್ಟರಲ್ಲಿ ನನ್ನ ಬೆಳಗಿನ ಚಹಾ ಕಪ್ಪು ಬಿಸ್ಕತ್ತುಗಳನ್ನು ತಂದಿಟ್ಟ ಸಾವಿತ್ರಮ್ಮನಿಗೆ "ಇನ್ನೊಂದು ಕಪ್ ಚಹಾ" ಎಂದೆ. ಪ್ರಶ್ನಾರ್ಥಕವಾಗಿ ನೋಡುತ್ತಿದ್ದವಳಿಗೆ ಒಳಗಿನಿಂದ ಹೊರಬಂದ ಸುಶೀಲೆಯನ್ನು ಕಂಡಾಗ ಉತ್ತರ ಸಿಕ್ಕಿತ್ತು.

ಅವಳೊಡನೆ ಮಾತಾಡಬೇಕೋ ಬೇಡವೋ ಎಂಬ ಸಂದಿಗ್ಧಕ್ಕೆ ಅವಕಾಶವೇ ಇಲ್ಲದಂತೆ ನಿಸೂರಾಗಿ ನನ್ನೆದುರಿನ ಕುರ್ಚಿಯಲ್ಲಿ ಕುಳಿತು ಸಾವಿತ್ರಮ್ಮ ತಂದಿಟ್ಟ ಚಹಾದ ಕಪ್ಪನ್ನೆತ್ತಿ ಗುಟುಕರಿಸುತ್ತಾ ಕಣ್ಣು ಮುಚ್ಚಿದಳು.

ಒಂದಿನಿತು ಕುಂದಿಲ್ಲದೆ ಕಪ್ಪು ಮಚ್ಚೆಯೂ ಇಲ್ಲದಿರುತ್ತಿದ್ದ ಗೌರವರ್ಣದ ಮುಖದ ಹೊಳಪು ತುಸು ಇಳಿಕೆಯಾಗಿತ್ತು. ಕಣ್ಣಕೆಳಗೆ ಕಪ್ಪು ವರ್ತುಲಗಳೂ, ಕೆನ್ನೆಯ ಮೇಲ್ಮೂಳೆಯ ಮೇಲೆ ಬಂಗಿನ ಕುರುಹುಗಳೂ, ನೆತ್ತಿಯಲ್ಲಿ ಅಲ್ಲಲ್ಲಿ ಕೆಂಪುಕಪ್ಪು ಗುರುತುಗಳೂ ಕಾಣುತ್ತಾ ವಯಸ್ಸಿನ ಅಧಿಕೃತತೆಯನ್ನು ಸಾರುತ್ತಿತ್ತು. ಕೂದಲು ಒಂಚೂರೂ ಬೆಳ್ಳಗಾಗದೆ ಒತ್ತಾಗಿ ಮಿಂಚುತ್ತಿತ್ತು. 'ಬಣ್ಣ ಹಾಕಿರಬಹುದು' ಎಂದುಕೊಂಡೆ.

"ನಾನಿವತ್ತು ಇಲ್ಲೇ ಇರಬಹುದಾ? ಇವತ್ತೊಂದುದಿನ" ಎಂದಳು. ಶುಷ್ಕವಾಗಿ ನಕ್ಕೆ. ಈ